


ಜೋರಾಗಿ ಕೂಗಾಕತ್ತಿದ್ಲು. ‘ನೋಡು ಗೌರವ್ವ. ನೀನು ಧರ್ಮದೇವತೆ, ನೀನು ನಿಜವಾದ ಗರತಿ. ನನ್ನದು ಪದಕದ ಸರಾ ಆಗ್ಲಿ ಮುತ್ತಿನ ಬುಗುಡಿ ಆಗ್ಲಿ ಇರಲಿಲ್ಲ. ನಾ ನಿನ್ನ ಕಡೆಗೆ ಕೊಟ್ಟದ್ದು ಗೆಜ್ಜೆಟೀಕಿ ಮಾತ್ರ ಅಂತಾ ಹೇಳ್ತಾ , ‘ನಾನು ಸಾವಂತ್ರಿ, ನನ್ನ ಸೊಸಿ ಕಮಲವ್ವನ ಮೈಯಾಗ ಹೊಕ್ತು ನುಡಸಾಕತ್ತಿನಿ, ದೈವಕ್ಕ ಕೈ ಮುಗಿತೀನಿ. ಗೌರವ್ವ ಗೌಡಶಾನಿ ಮೋಸ ಮಾಡಿಲ್ಲ. ಆಕಿ ಅಂತಕಿ ಅಲ್ಲಾ’ ಅಂತಾ ಹೇಳುತಾ ಇರುವಾಗ ಕಮಲವ್ವನ ನಾಲಿಗೆ ಸೇದಿ ಹೋತು. ನೋಡತಾ ನೋಡತಾ ಎಲ್ಲರೂ ದಂಗ ಬಡಿದ್ರು. ಗೌಡಶಾನಿ ಕಡೆಗೆ ಇಟ್ಟ ಯಾರದೋ ಬುಗುಡಿ ಸಾವಂತ್ರಿ ಗಂಟಿಗೆ ಸಿಕ್ಕು ಅವತ್ತು ಅವರ ಮನಿಗೆ ಬಂದಿತ್ತು. ಇದ ಬಿಟ್ರ ನಡೆದದ್ದು ಏನೆಲ್ಲಾ ಆತು ಅನ್ನೋದು ನೆರೆದ ಜನಕ್ಕೆ ಗೊತ್ತಾತು. ಗೌರವ್ವನ ಮಾನ ಹೆಚ್ಚಾತು. ಊರ ಜನ ಕೊಂಡಾಡಿದರು. ಗೌಡಶಾನಿ ಧರ್ಮಕ್ಕ ಜಯ ಸಿಕ್ಕಿತ್ತು. ಸಹಿಸಲಾರದ ಅಪ್ರಾಮಾಣಿಕತೆಯ ಅಪವಾದಕ್ಕೆ ತಿಂಗಳಾನುಗಟ್ಟಲೆ ಗೌಡಸಾನಿ ಒಳಗ ಒಳಗ ಸಣ್ಣ ಆಗಿದ್ಲು. ಎರಡು ಮನೆತನಗಳ ನಡುವೆ ಇರುವ ಸಂಬಂಧಕ್ಕ ಮಸಿ ಬಳದಂಗ ಆಗಿದ್ದ ಈ ವಿಷಯ ಸುಖಾಂತ್ಯವಾಗಿತ್ತು. ಕಾಣದಿರುವ ದೈವದ ಆಕಾಶಗೋಡಲಿ ತಪ್ಪು ಮಾಡಿದವರಿಗೆ ಶಿಕ್ಷೆ ನೀಡಿತ್ತು.

ಶೆಟ್ರು–ಗೌಡರು ಇಬ್ಬರೂ ಬಿಗಿದು ಅಪ್ಪಿದರು. ಇಬ್ಬರ ಭಾವಗಳು ಕಣ್ಣು ಗಳಲ್ಲೇ ಅನುವಾದಗೊಂಡಿದ್ವು ರೆಪ್ಪೆಗುಂಟ ಹರಿದ ಹನಿಗಳು ಶಾಂತ ಸಮುದ್ರದಂಗ ಸಮಾಧಾನವಾಗಿದ್ವು. ಗೌರವ್ವನ ಮುಖದ ತುಂಬ ಸಂಜೆ ಸೂರ್ಯ ರಂಗೇರಿದ್ದ. ಸತ್ಯ, ನ್ಯಾಯ, ಧರ್ಮ, ಪ್ರಾಮಾಣಿಕತೆಗಳಿಗೆ ಬೆಳಕಿನಂತ ಋಜು ಹಾಕಿದ್ದ.

●